ಬಾವಿಗೆ ಬೀಳ್ತಿನಿ ಅಂತ ದಿನಾಲೂ ಗಲಾಟೆ ಮಾಡೋಳತ್ರ ಎಷ್ಟು ದಿನ ಅಂತ ಫೈಟ್ ಮಾಡ್ಬೋದು. ಕೇತಕಿ ಇಲ್ಲಿ ಕೇಳು, ನಂಗೆ ಈ ಮದ್ವೆ, ಸಂಸಾರದ ಮೇಲೆ ಸ್ವಲ್ಪನೂ ಆಸಕ್ತಿಯಿಲ್ಲ. ಹಾಗಂತ ಅದರ ಬಗ್ಗೆ ಗೌರವ ಇಲ್ಲ ಅಂತ ಅಲ್ಲ. ಅದೇನೋ ಅದೊಂದು ಕಮಿಟ್ಮೆಂಟು ನನ್ನಿಂದಾಗದು'. ದನಿ ಸ್ವಲ್ಪ ಸಣ್ಣಗಾಗಿಸಿ, 'ಹಾಗಂತ ನಾನು ಇಂಪೊಂಟೆಂಟ್ ಅಲ್ಲ, ನಂಗೂ ಅಗತ್ಯ ಅಂತ ಅನ್ನಿಸಿದಾಗ ಹುಡುಗಿಯರ ಸಂಪರ್ಕ ಮಾಡಿದ್ದೇನೆ. ಹಾಂ, ಇದನ್ನೂ ಅಹಂಕಾರದಿಂದ ಅಥವಾ ಮಾಡೆಸ್ಟಿಯಿಂದ ಹೇಳ್ತಿಲ್ಲ. ಐ ಜಸ್ಟ್ ವಾಂಟ್ ಟು ಮೇಕ್ ಇಟ್ ಕ್ಲಿಯರ್, ಅಷ್ಟೇ'. ಕಣ್ಣು ಕಿರಿದಾಗಿಸಿಕೊಂಡು ನೋಡಿದವಳಿಗೆ, 'ಹಾಂ, ನಾನು ಹುಚ್ಚನ ಹಾಗೆ ಕಾಣ್ತೀನಲ್ವಾ, ಆದ್ರೆ ಹುಚ್ಚನಲ್ಲ. ಸರಿಯಾಗಿ ಇದೀನಿ. ತೋಟದ ಎಲ್ಲ ವ್ಯವಹಾರಗಳನ್ನು, ಬ್ಯಾಂಕಿನ ವ್ಯವಹಾರಗಳನ್ನು ಅಂದ್ರೆ ಸಾಮಾನ್ಯರು ಮಾಡೋ ಎಲ್ಲವನ್ನೂ ಪರ್ಫೆಕ್ಟ್ ಮಾಡ್ತಿನಿ. ಎಲ್ಲವೂ ಸರಿಯಾಗಿದೆ. ಆದ್ರೆ ಮದ್ವೆಗೆ ಮಾತ್ರ ನಾನು ಹೇಳಿದವನಲ್ಲ. ಆದ್ರಿಂದಲೇ ಆಮೇಲೆ ನೀನು ಸಫರ್ ಆಗ್ಬಾರ್ದು ಅಂತ ಇಷ್ಟು ನೇರವಾಗಿ ಹೇಳ್ತಾ ಇದೇನೆ'. ಬಡಬಡ ಮಾತಾಡಿದವನ ಮುಖವನ್ನು ದಿಟ್ಟಿಸಿ ನೋಡಿದರೆ, ಏನೋ ಸಂಕಟದಿಂದ ಒದ್ದಾಡುತ್ತಿರುವವನಂತೆ ಕಂಡ. ಅಯ್ಯೋ ಇಷ್ಟು ಸಂಕಟವೇ ಇವನಿಗೆ ಎನಿಸಿತು ಕೇತಕಿಗೆ. 'ಯಾರನ್ನಾದರೂ...' ಮಾತು ಮುಗಿಸುವ ಮೊದಲೇ ಸಂದೀಪ, 'ಇಷ್ಟಪಟ್ಟಿದೀನಿ ಅಂತನಾ? ಓಹ್ ಕೇತಕಿ, ಹಾಗಿದ್ದಿದ್ರೆ ಇಷ್ಟು ಕಷ್ಟವೇ ಇರಲಿಲ್ಲ. ಇಷ್ಟಪಟ್ಟಿದ್ದೆ, ಅದೆಲ್ಲವೂ ಕಾಲೇಜು ದಿನಗಳ ಹುಚ್ಚಾಟ. ಆದ್ರೆ ಯಾರ ಜೊತೆನೂ ಸಂಸಾರ ಕಟ್ಕೋಬೇಕು ಅಂತ ಅನಿಸ್ಲೇ ಇಲ್ಲ. ಐ ಸ್ವೇರ್ ಅಂಥದ್ದೇನಿಲ್ಲ' ಎಂದ ಸೋತವನಂತೆ. ಮತ್ತೆ, 'ಕೇತಕಿ, ತುಂಬಾ ಸಿಂಪಲ್ ಇದು. ನಂಗೆ ಮದ್ವೆನೇ ಇಷ್ಟ ಇಲ್ಲ. ನಾನೂ ಮದ್ವೆ ಆಗೋದು, ಜೊತೆಲಿ ಬದುಕೋದು ಅಬ್ಬಾ... ಯೋಚ್ನೆನೇ ಅಲರ್ಜಿ ನಂಗೆ. ಅರ್ಥ ಆದ್ರೆ ನಿಂಗೇ ಒಳ್ಳೆದು' ಎಂದ. ಅವನ ಹತಾಶೆ ನೋಡಿ ಇದೇನು ಹೀಗೆ ಎಂದು ಯೋಚಿಸುತ್ತಾ ಕೆಳಗಿಳಿದು ಬಂದವಳ ಮುಖವನ್ನು ಸಂದೀಪನ ಅಮ್ಮ ನೋಡಿ ಓಡಿ ಬಂದರು. ಕೈ ಹಿಡಿದು, 'ಕೇತಕಿ, ಸಂದೀಪ ಮದ್ವೆ ಇಷ್ಟ ಇಲ್ಲ ಅಂದಿರಬೇಕು ಅಲ್ವಾ' ಎಂದರು. ತಲೆ ಎತ್ತಿ ನೋಡಿದಾಗ ತುಂಟ ಮಗನನ್ನು ಶಾಲೆಗೆ ಸೇರಿಸಲು ಬಂದ ಅಸಹಾಯಕ ತಾಯಿಯಂತೆ ಕಂಡರು. ಅವರೇ ಮುಂದುವರಿದು, 'ಹುಂ, ಅವ್ನು ಹಾಗೇ, ಆದ್ರೆ ಸಂದೀಪ ಒಳ್ಳೆ ಹುಡುಗ. ಸುಳ್ಳು ಹೇಳೊನಲ್ಲ. ಅದ್ಯಾಕೆ ಮದ್ವೆ ಮಾತ್ರ ಬೇಡಾ ಹೇಳ್ತಾನೆ ಅಂತ ಮಾತ್ರ ಗೊತ್ತಾಗುತ್ತಿಲ್ಲ' ಆಸೆಯಿಂದ ಅವರು ಮಾತಾಡುತ್ತಿದ್ದರೆ ಕೇತಕಿ, 'ಯೋಚ್ನೆ ಮಾಡ್ತಿನಿ' ಎಂದು ಹೇಳಿ ಸುಮ್ಮನಾಗಿದ್ದಳು.

★★★

ರಾತ್ರಿ ನಿದ್ದೆ ಬಾರದೆ ಹೊರಳಾಡುತ್ತಿದ್ದ ಕೇತಕಿಗೆ ಸಂಜೆ ಬಂದು ಹೋದ ಸಂದೀಪ ಒಗಟಾಗಿ ಕಂಡಿದ್ದ. ಯೋಚನೆಗೆ ತೊಡಗಿದಳು. ಸಂದೀಪನ ಬಗ್ಗೆ ಕೇಳಿದ್ದಳು, ಸಂಬಂಧಿಕರು ಮಾತಾಡುವಾಗ. ನೆರೆಹೊರೆಯವರ ಮಾತುಗಳಿಂದ ಅವನ ಬಗ್ಗೆ ಸಣ್ಣ ಕುತೂಹಲವೂ ಉಂಟಾಗಿತ್ತು. ಸ್ವಲ್ಪ ವಿಶೇಷವೇ ಇವನು ಎಂದೂ ಮನಸಿಗೆ ಅನಿಸಿತ್ತು. ಅವನೊಂದಿಗೆ ಈ ಮದುವೆಯ ಪ್ರಸ್ತಾಪ ಬಂದಾಗ ಅಚ್ಚರಿಯೂ ಆಗಿತ್ತು. ಸಂದೀಪನಿಗೆ ಈಗ ಮೂವತ್ತೇಳು, ತಾನೂ ಮೂವತ್ತನಾಲ್ಕರ ಹರೆಯದವಳು. ಅಲ್ಲಿಂದಲ್ಲಿಗೆ ತಕ್ಕಮಟ್ಟಿಗೆ ಸ್ಥಿತಿವಂತರೇ ಎನ್ನಬಹುದು. ಅಪ್ಪ ತೀರಿಕೊಂಡ ಮೇಲೆ ಚಿಕ್ಕಪ್ಪ ಚೆನ್ನಾಗೇ ನೋಡಿಕೊಂಡಿದ್ದಾರೆ, ಓದಿಸಿದ್ದಾರೆ. ಈಗ ತನಗೂ ಟೀಚರ್ ಕೆಲಸವಿದೆ. ಸಂದೀಪನ ನಿರಾಕರಣೆ ಬಿಟ್ರೆ ಈ ಸಂಬಂಧ ಬೇಡವೆನ್ನಲು ಯಾವುದೇ ಕಾರಣಗಳಿರಲಿಲ್ಲ. ಜನ್ಮನಕ್ಷತ್ರದ ಕಾರಣ ಮಾವನಿರುವ ಮನೆಯಾಗದು ಎಂದು ಇಷ್ಟು ಸಮಯ ಬಂದ ಸಂಬಂಧಗಳು ಕುದುರಲೇ ಇಲ್ಲ. ಈ ಸಂದೀಪ ದೊಡ್ಡ ಮಗ; ಅವನಪ್ಪ ತೀರಿ ಹೋಗಿ ಅನೇಕ ವರ್ಷಗಳಾಗಿವೆ. ತನ್ನ ಮದುವೆಯ ತಲೆಬಿಸಿಯಿಂದ ನರಳುತ್ತಿದ್ದ ಆಯಿಗೆ ಸಂದೀಪ ಇಷ್ಟವಾಗಿದ್ದ. ಆದರೆ, ಹೀಗೆ ನೇರವಾಗಿ ಬಂದು